# ನಾವೆಷ್ಟು ಪೂರ್ವಗ್ರಹ ಪೀಡಿತರು!

ನಾಲ್ಕು ವರ್ಷಗಳ ಹಿಂದೆ ಮಧುಚಂದ್ರಕ್ಕೆಂದು ಕಾಶ್ಮೀರಕ್ಕೆ ನಾನು ನನ್ನ ಹೆಂಡತಿ ಹೋಗಿದ್ದೆವು. ಆಗಿನ್ನೂ 370 ಆರ್ಟಿಕಲ್ ರದ್ದು ಮಾಡುವ ಬಗ್ಗೆ ಗದ್ದಲವಿತ್ತು. ನಮ್ಮ ಕ್ಯಾಬ್‌ಗೆ ಪಾಕಿಸ್ತಾನಿ ಡ್ರೈವರ್ ಅನ್ನು ನೀಡಲಾಗಿತ್ತು. ಅಲ್ಲಿ ಡ್ರೈವರ್ ಎಲ್ಲಿಗೆ ಕರೆದುಕೊಂಡು ಹೋದರೂ ಅದರಿಂದ ಕಮಿಷನ್ ಪಡೆಯುತ್ತಾರೆ. ಅದು ಸಹಜ ಕೂಡ. ದಾಲ್ ಲೇಕ್‌ನಲ್ಲಿ ಹೀಗೆ ಕಮಿಷನ್ ಪಡೆದು ಆ ಡ್ರೈವರ್ ನಮ್ಮನ್ನು ಬಕ್ರಾ ಮಾಡಿದ್ದರು. ಇದರ ಬಗ್ಗೆ ನಮ್ಮಿಬ್ಬರಿಗೂ ಸ್ವಲ್ಪ ಸಿಟ್ಟು, ಬೇಸರವಿತ್ತು.

ಹೀಗೆ ನಮಗೆ ಬಂದಿದ್ದ ಡ್ರೈವರ್‌ಗೆ 370 ಆರ್ಟಿಕಲ್ ರದ್ದು ಮಾಡಿದ್ದಕ್ಕೆ ಕೇಂದ್ರ ಸರ್ಕಾರದ ಬಗ್ಗೆ ತೀವ್ರ ಆಕ್ಷೇಪವಿತ್ತು. ಇದನ್ನು ತಿಳಿದುಕೊಂಡಿದ್ದ ನಾನು ಅವರನ್ನು ಸುಮ್ಮನೆ ಕಿಚಾಯಿಸಲು ಕೇಂದ್ರ ಸರ್ಕಾರದ ಬಗ್ಗೆ ಹೊಗಳಲು ಶುರು ಮಾಡಿದೆ. ಅವನೂ ಅದಕ್ಕೆ ಸ್ವಲ್ಪ ರೊಚ್ಚಿಗೆದ್ದ. ನಾನು ಸರ್ಕಾರದ ಪರ, ಅವನೂ ಅದರ ವಿರುದ್ಧ.. ಹೀಗೆ ಕಾವೇರಿದ ಚರ್ಚೆ ನಡೆಯಿತು. ಆತ ಕ್ಯಾಬ್ ಅನ್ನು ಪೆಟ್ರೋಲ್ ಬಂಕ್‌ವೊಂದರ ಮುಂದೆ ನಿಲ್ಲಿಸಿ ಸುಖಾಸುಮ್ಮನೆ ನಡೆದು ಹೋದ. ನಾನು ಗಾಬರಿಯಾದೆ. ಮೊದಲೇ ನೂರು ಮೀಟರ್‌ಗಳಿಗೊಮ್ಮೆ ಮಿಲಿಟರಿ ಇದೆ. ಮಿಲಿಟರಿ ಹಾಗೂ ಭಯೋತ್ಪಾದಕರ ನಡುವೆ ಗಲಾಟೆ ಇದೆ. ಈತ ಏನಾದರೂ ಸರ್ಕಾರದ ಪರ ಮಾತನಾಡಿದ್ದಕ್ಕೆ ಸಿಟ್ಟಿಗೆದ್ದು ಹೊರಟನಾ? ಕಾರಿನಲ್ಲಿ ಬಾಂಬ್ ಇರಬಹುದಾ? ಹೀಗೆ ಏನೇನೋ ಬೇಡದ ಆಲೋಚನೆಗಳು ತಲೆಗೆ ಬಂದು, ನಾನು ಇಳಿದು, ಹೆಂಡತಿಯನ್ನು ಲಗುಬಗೆಯಿಂದ ಇಳಿಸಿದೆ. ನಿದ್ದೆಯಲ್ಲಿದ್ದ ಅವಳು ಬೈದುಕೊಳ್ಳುತ್ತಲೇ ಇಳಿದಳು. ಒಂದು ಹತ್ತು ನಿಮಿಷ ಆದ ಮೇಲೆ ಆತ ಕಾರಿನೊಳಗೆ ಬಂದು ನಮ್ಮನ್ನು ತಲುಪಿಸಬೇಕಾದ ಜಾಗಕ್ಕೆ ತಲುಪಿಸಿದ. ಈ ಘಟನೆ ನನಗೆ ನನ್ನ ಬಗ್ಗೆ ನಾಚಿಕೆಯಾಗುವಂತೆಯೂ ಮಾಡಿತು.

ಕಾಶ್ಮೀರವೊಂದು ಸ್ವರ್ಗ. ನಾವೆಷ್ಟು ಪೂರ್ವಗ್ರಹ ಹೊಂದಿರುತ್ತೇವೆ. ಆದರೆ, ಅದು ಹಾಗಿರುವುದಿಲ್ಲ. ಆ ಕ್ಷಣಕ್ಕೆ ನನಗೆ ಭಯ ಅನಿಸಿದ್ದು, ಈಗ ನೆನೆಸಿಕೊಂಡಾಗ ನಗು ತರಿಸುತ್ತದೆ.



ಶ್ರವಣ್ ನಾರಾಯಣ್

# ದನದ ಡಾಕ್ಟರ್ ಕಥೆ



ಪಲ್ಲವಿ ಪಾಂಚಾಳ್

ಪಶುವೈದ್ಯಕೀಯ ಪದವೀಧರೆ. ತರಬೇತಿ ವೈದ್ಯೆಯಾಗಿದ್ದೇನೆ. ವಿವಿಧ ಅಭಿರುಚಿ ಮತ್ತು ಹಿನ್ನೆಲೆಯ ಜನರು ನಮ್ಮ ಸಂಪರ್ಕಕ್ಕೆ ಬರುತ್ತಾರೆ. ಅನೇಕ ಸಂದರ್ಭದಲ್ಲಿ ನಮ್ಮ ಮಾತುಕತೆ ವಿಚಿತ್ರವಾಗಿ ನಮ್ಮನ್ನು ಫಜೀತಿಗೆ ಸಿಲುಕಿಸುತ್ತದೆ. ಆಮೇಲೆ ಅದನ್ನು ನೆನಪಿಸಿಕೊಂಡರೆ ತಮಾಷೆಯಂತೆ ಅನಿಸುತ್ತದೆ. ವೆಟರ್ನರಿ ವೈದ್ಯ ಎಂದರೆ ಹಳ್ಳಿಯಲ್ಲಿ ಅನೇಕರಿಗೆ ಗೊತ್ತಾಗುವುದಿಲ್ಲ. ದನದ ಡಾಕ್ಟರ್ ಎಂದರೆ ಮಾತ್ರ ಅರ್ಥಮಾಡಿಕೊಳ್ಳುತ್ತಾರೆ.

ಒಮ್ಮೆ ಒಬ್ಬರು ನಾನು ಡಾಕ್ಟರ್ ಎಂದು ತಿಳಿದು ಫೋನ್ ಮಾಡಿದರು. 'ತುಂಬ ತುರ್ತು ಇದೆ ಮನೆಗೆ ಭೇಟಿ ಕೊಡಬಹುದೆ' ಎಂದು ಹೇಳಿದರು. ನನಗೂ ಸೇವೆ ಮಾಡಬೇಕು ಎನ್ನುವ ಉತ್ಸಾಹದಿಂದ 'ಆಯ್ತು' ಎಂದೆ.

'ಅದಕ್ಕೆ ಹುಷಾರಿಲ್ಲ. ಬೆಳಿಗ್ಗೆಯಿಂದ ಊಟ ಮಾಡ್ತಿಲ್ಲ ಅದು ಬೇಗ ಬನ್ನಿ' ಎಂದು ಹೇಳಿದರು. ನಾನು ಅಷ್ಟೇ ತರಾತುರಿಯಲ್ಲಿ ರೆಡಿಯಾಗಿ ಹೇಳಿದ ವಿಳಾಸಕ್ಕೆ ಹೋಗಿ 'ಪೇಶೆಂಟ್ ಎಲ್ಲಿ?' ಅಂದೆ. ಅವರು 'ಅದು ಬೆಳಿಗ್ಗೆಯಿಂದ ತ್ರಾಸ್ ಪಡ್ತಿದೆ. ಊಟಾನೇ ಮಾಡ್ತಿಲ್ಲ' ಎಂದು ಮತ್ತೆ ಹೇಳಿದರು. 'ಅದು ಎಲ್ಲಿದೇರಿ' ಎಂದೆ. ಅದು ನಮ್ಮ ಅಜ್ಜಿರೀ ಒಳಗ ಮಲಗ್ಯಾಳ' ಅಂದ್ರು. 'ಅಯ್ಯೋ ಕ್ಷಮಿಸಿ. ನಾನು ದನದ ಡಾಕ್ಟ್ರು' ಎಂದು ಹೇಳಿ ಬಂದೆ.

***

ಬೆಂಗಳೂರಿನಿಂದ ಬೀದರಿಗೆ ಮೊದಲ ಬಾರಿಗೆ ಎ.ಸಿ. ಟ್ರೈನ್‌ನಲ್ಲಿ ಹೊರಟಿದ್ದೆ. ಒಳ ಹೋದೆ ಬ್ಲಾಂಕೆಟ್ ಇಟ್ಟಿದ್ದರು. ಅದನ್ನು ಸರಿಪಡಿಸಿಕೊಂಡೆ. ಕೆಲವರು ತಿಂಡಿ ತಿನಿಸು ಸವಿಯುತ್ತಿದ್ದರು. ಅವರೆಲ್ಲ ಪ್ಯಾಕೇಜ್ ಟಿಕೆಟ್ ಮಾಡಿಸಿದ್ದರು ಎಂದೆನಿಸುತ್ತದೆ. ನನ್ನ ಸೀಟಿನ ಮೇಲೆ ಊಟದ ಪೊಟ್ಟಣ ಇಟ್ಟಿದ್ದರು. ಅದು ಟ್ರೈನ್‌ನವರೇ ಇಟ್ಟಿರಬೇಕು ಎಂದುಕೊಂಡು ತೆರೆದು ತಿನ್ನಲು ಶುರುಮಾಡಿದೆ. ಹಸಿವು ಬೇರೆ ಆಗಿತ್ತು.

ಅಷ್ಟರಲ್ಲಿ ಒಬ್ಬರು ಬಂದು ನಿಂತು ನೋಡಿದರು. ನಾನು 'ಏನು ಬೇಕಿತ್ತು' ಎಂದು ಕೇಳಿದೆ. 'ಮೇಡಂ ಒಂದು ಜೊಮ್ಯಾಟೊ ಆರ್ಡರ್ ಇತ್ತು. ನೀವೇನಾದರೂ ನೋಡಿದ್ರಾ?' ಎಂದು ಕೇಳಿದರು. ಅದು ನನ್ನ ಕೈಯಲ್ಲಿತ್ತು. 'ನೀವೇನು ಆರ್ಡರ್ ಮಾಡಿದ್ರಿ' ಎಂದೆ. 'ಚಿತ್ರಾನ್ನ' ಅಂದರು. ನಾನೂ ಅದನ್ನೇ ತಿನ್ನುತ್ತಿದ್ದೆ. ಅವರು 'ನೀವು ಎಲ್ಲಿಂದ ಆರ್ಡರ್ ಮಾಡಿದ್ದು' ಎಂದ್ರು? ನಾನು 'ಆರ್ಡರ್ ಮಾಡಿಲ್ಲ. ಟ್ರೈನ್‌ನವರೆ ಇಟ್ಟಿದ್ದರು' ಎಂದೆ. 'ಇಲ್ಲಾರಿ ಅದು ನಮ್ಮದೇ' ಅಂದ್ರು. 'ಹೌದಾ... ಸರಿ ಸರಿ ತೆಗೆದುಕೊಳ್ಳಿ. ಇನ್ನೇನು ತಿನ್ನಬೇಕಿತ್ತು' ಎಂದು ಪೊಟ್ಟಣವನ್ನು ಸರಿ ಮಾಡಿ ಹಿಂದಕ್ಕೆ ಕೊಟ್ಟು ಮುಗುಳ್ನಕ್ಕೆ. ಮೂರ್ನಾಲ್ಕು ತುತ್ತು ತಿಂದಿದ್ದೆ. ಅದು ಕಾಣದಂತೆ ಚಿತ್ರಾನ್ನ ಸಮಾ ಮಾಡಿದ್ದೆ. ಪಾಪ ಅವರು ನಗುತ್ತಲೇ ತೆಗೆದುಕೊಂಡಿದ್ದರು. ಅವರ ಜೊತೆ ಮಾತನಾಡುತ್ತಾ 14 ಗಂಟೆ ಪ್ರಯಾಣ ಮಾಡಿದೆ.

ವೃತ್ತಿಯಿಂದ ಪಶು ವೈದ್ಯಕೀಯ ವಿದ್ಯಾರ್ಥಿನಿ, ಝೀ ಕನ್ನಡದ 'ಕಾಮಿಡಿ ಕಿಲಾಡಿ' ರಿಯಾಲಿಟಿ ಶೋ ಸೀಸನ್ 5ರ ಸ್ಪರ್ಧಿ. ಬೀದರ್ ಸಮೀಪದ ತಾಳಮಡಗಿಯವಳು. ವೆಬ್‌ಸೀರೀಸ್ ಸಿನಿಮಾದಲ್ಲಿ ಆಸಕ್ತಿ ಇದೆ.